ಸಿ ಮಿಸ್ ಸಂಖ್ಯೆ226/ 2023

ಪಿ ಡಬ್ಲ್ಯೂಃ 1 ಶ್ರೀಮತಿ ನೀಲಮ್ಮ

**ದಿನಾಂಕ : 03.11.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ – ಎದುರುದಾರರ ಪರ ಶ್ರೀ ಡಿ ಎಸ್ ಬಿ ವಕೀಲರಿಂದಃ**

ನಾನು 2015 ನೇ ಸಾಲಿನಿಂದ ಎದುರುದಾರರ ಜೊತೆ ವಾಸವಿಲ್ಲ. 2015 ರ ನಂತರ ಎದುರುದಾರರ ಜೊತೆ ವಾಸ ಮಾಡಲು ಕೋರಿ ಯಾವುದೇ ನೋಟೀಸ್ ಕೊಟ್ಟಿಲ್ಲ ಹಾಗೂ ಯಾವುದೇ ಅರ್ಜಿಯನ್ನು ದಾಖಲು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಎರಡು ಬಾರಿ ಪಂಚಾಯತಿ ಮಾಡಿಸಿದ್ದೆವು ಎಂದು ನುಡಿಯುತ್ತಾರೆ. ನಿಖರವಾಗಿ ಯಾವ ದಿನಾಂಕದಂದು ಪಂಚಾಯತಿ ಮಾಡಿಸಲಾಯಿತು ಎಂದು ನನಗೆ ಗೊತ್ತಿಲ್ಲ. ಎದುರುದಾರರ ಊರಿನಲ್ಲಿಯೇ ಪಂಚಾಯತಿ ಮಾಡಿಸಲಾಗಿತ್ತು. ಸದರಿ ಪಂಚಾಯತಿ ಮಾಡಿದಾಗ ಎದುರುದಾರರು ನನ್ನ ಅಮ್ಮ ಹೇಳಿದಂತೆ ಕೇಳುತ್ತೇನೆ ಎಂದು ಹೇಳಿರುತ್ತಾರೆ. ಅದೇ ರೀತಿ ನನ್ನ ಅತ್ತೆ ನನ್ನನ್ನು ಮನೆಗೆ ವಾಪಸ್ ಕರೆದುಕೊಂಡು ಹೋಗಿದ್ದರು. 2015 ನೇ ಸಾಲಿನಲ್ಲಿಯೇ ಪಂಚಾಯತಿಯ ನಂತರ ನನ್ನ ಅತ್ತೆ ನನ್ನನ್ನು ಮನೆಗೆ ಕರೆದುಕೊಂಡು ಹೋಗಿದ್ದರು. ಈ ಬಗ್ಗೆ ಅರ್ಜಿಯಲ್ಲಿ ತಿಳಿಸಿಲ್ಲ ಎಂದರೆ ನಾನು ನನ್ನ ವಕೀಲರಿಗೆ ತಿಳಿಸಿದ್ದೆ.

ನಾನು 2014 ನೇ ಸಾಲಿನಲ್ಲಿ ನನ್ನ ತಾಯಿಯ ಮಾತು ಕೇಳಿಕೊಂಡು ಗೌರಿ ಹಬ್ಬಕ್ಕೆ ಹೋದವಳು ಎದುರುದಾರರ ಮನೆಗೆ ವಾಪಸ್ ಬಂದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಎದುರುದಾರರು ವಿವಾಹದ ನಂತರ ಕೇವಲ 3 ರಿಂದ 4 ತಿಂಗಳು ಮಾತ್ರ ವಾಸವಿದ್ದೆವು ಎಂದರೆ ಸರಿ. ಆ ಸಂದರ್ಭದಲ್ಲಿ ನಾನು ಗರ್ಭಿಣಿಯಾಗಿದ್ದೆ ಎಂದರೆ ಸರಿ. ನಾನು ನನ್ನ ತಾಯಿಯ ಜೊತೆ ಸೇರಿಕೊಂಡು ಮೈಸೂರಿನಲ್ಲಿ ಗರ್ಭಪಾತ ಮಾಡಿಸಿಕೊಂಡಿದ್ದೆ ಎಂದರೆ ಸರಿಯಲ್ಲ. ನನಗೆ ಕೊಳ್ಳೇಗಾಲದಲ್ಲಿಯೇ ಗರ್ಭಪಾತವಾಗಿತ್ತು. ಕೊಳ್ಳೇಗಾಲದಲ್ಲಿ ಗರ್ಭಪಾತವಾಗಿತ್ತು ಎಂಬುದಾಗಿ ತಿಳಿಸಲು ನಾನು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಆ ಎಲ್ಲಾ ದಾಖಲಾತಿಗಳು ಎದುರುದಾರರ ಮನೆಯಲ್ಲಿಯೇ ಇದೆ ಎಂದು ನುಡಿಯುತ್ತಾರೆ.

ಗರ್ಭಪಾತ ಆದ ನಂತರ ನನ್ನ ಮತ್ತು ಎದುರುದಾರರ ನಡುವೆ ಅಸಮಾಧಾನ ಉಂಟಾಗಿ ಮಾತುಕತೆ ನಡೆದಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಗರ್ಭಪಾತ ಆದ ನಂತರ ಅವರ ಮನೆಗೆ ವಾಪಸ್ ಹೋಗಿಲ್ಲ ಎಂದು ನುಡಿಯುತ್ತಾರೆ.

ಎದುರುದಾರರು ಕಿರುಕುಳ ಕೊಟ್ಟಿರುತ್ತಾರೆ ಎಂಬುದಾಗಿ 2017 ರಲ್ಲಿ ನಾನು ಸಿ ಡಿ ಪಿ ಒ ರವರಿಗೆ ಒಂದು ದೂರು ದಾಖಲು ಮಾಡಿದ್ದೆ ಎಂದರೆ ಸರಿ. ಸದರಿ ದೂರಿನಂತೆ ಈ ನ್ಯಾಯಾಲಯದಲ್ಲಿ ಸಿ ಮಿಸ್ 303/2017 ದಾಖಲಾಗಿತ್ತು ಎಂದರೆ ಸರಿ. ಸದರಿ ಪ್ರಕರಣ 2022 ನೇ ಸಾಲಿನಲ್ಲಿ ವಜಾಗೊಂಡಿತ್ತು ಎಂದರೆ ಸರಿ. ಸದರಿ ವಜಾಗೊಂಡ ಆದೇಶದ ಮೇರೆಗೆ ಮೇಲ್ಮನವಿ ದಾಖಲು ಮಾಡಿರುವುದಿಲ್ಲ ಎಂದರೆ ಸರಿ. ನಾನು ನನ್ನ ಆಸ್ತಿ ಮತ್ತು ಭಾಧ್ಯತೆಯ ಪ್ರಮಾಣಪತ್ರದಲ್ಲಿ ಮಾಸಿಕ ರೂ.7,000/– ಗಳ ಜೀವನಾಂಶ ಕೋರಿರುತ್ತೇನೆ

ಎಂದರೆ ಸರಿ.  ಎದುರುದಾರರು ಖಾಸಗಿ ಬಸ್ ನಲ್ಲಿ ಚಾಲಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಅವರಿಗೆ ತಿಂಗಳಿಗೆ ರೂ.24,000/- ಗಳ ಆದಾಯ ಇದೆ ಎಂಬುದಾಗಿ ಹೇಳಿರುತ್ತೇನೆ. ಆ ಬಗ್ಗೆ ನನಗೆ ಖುದ್ದು ಮಾಹಿತಿ ಇರುತ್ತದೆ ಆದರೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ.

ಎದುರುದಾರರ ಅಜ್ಜಿಯ ಹೆಸರಿನಲ್ಲಿ ಜಮೀನುಗಳು ಇದ್ದು ಒಂದು ಬೆಳೆಗೆ ರೂ.1,00,000/- ಗಳ ಆದಾಯ ಇದೆ ಎಂಬುದಾಗಿ  ಹೇಳಿರುತ್ತೇನೆ. ಆ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಆಸ್ತಿ ಇರುವ ಸಂಬಂಧ ದಾಖಲಾತಿ ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ ಎದುರುದಾರರು ಭತ್ತ ಬೆಳೆಯುತ್ತಾರೆ. ಪಾತಮ್ಮನ ಹೆಸರಿನಲ್ಲಿ ಜಮೀನು ಇದ್ದು ಆಕೆಗೆ ಎಷ್ಟು ಜನ ಮಕ್ಕಳು ಎಂದು ನಿಖರವಾಗಿ ಗೊತ್ತಿಲ್ಲ ಆದರೆ ಒಬ್ಬನೇ ಮಗ ಎಂದು ನನಗೆ ತಿಳುವಳಿಕೆ ಇರುತ್ತದೆ.  ಎದುರುದಾರರು ಪಾತಮ್ಮನ ಜಮೀನು ವ್ಯವಸಾಯ ಮಾಡಲು ಅದರಲ್ಲಿ ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತಿಗೂ ಎದುರುದಾರರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರ ಹೆಸರಿಗಾಗಲೀ ಅಥವಾ ಅವರ ತಂದೆ ತಾಯಿಯ ಹೆಸರಿಗಾಗಲೀ ಯಾವುದೇ ಸ್ವತ್ತುಗಳು ಇಲ್ಲ ಎಂದರೆ ಸರಿ.  ಎದುರುದಾರರಿಗೆ ಯಾವುದೇ ಆದಾಯದ ಮೂಲ ಇಲ್ಲದೇ ಇದ್ದರೂ ಸಹಾ ಸುಳ್ಳು ಪ್ರಮಾಣಪತ್ರಿಕೆ ಸಲ್ಲಿಸಿದ್ದೇನೆ  ಎಂದರೆ ಸರಿಯಲ್ಲ.

ಎದುರುದಾರರು ಚಾಲನೆ ಕೆಲಸ ಮಾಡಿದ್ದೇ ಆದಲ್ಲಿ ದಿನಕ್ಕೆ ರೂ.500/- ರಿಂದ ರೂ.1000/- ಹಣ ಬರುತ್ತದೆಯೇ ಹೊರತು ನಿಖರವಾಗಿ ಇಷ್ಟೇ ಹಣ ಬರುತ್ತದೆ ಎಂದು ಹೇಳಲು ಬರುವುದಿಲ್ಲ ಎಂದರೆ ಎಂದರೆ ಸರಿಯಲ್ಲ. ಎದುರುದಾರರಿಗೆ ಮಾಸಿಕ ರೂ.24,000/- ಗಳ ಆದಾಯ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆತ ಒಂದು ದಿನವೂ ಸಹಾ ರಜೆ ಹಾಕದೇ ಕೆಲಸ ಮಾಡುತ್ತಾರೆ ಹಾಗಾಗಿ ಹಾಗೆ ಹೇಳಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಅರ್ಜಿಯಲ್ಲಿ ನಾನು ಎದುರುದಾರರಿಗೆ ತಿಂಗಳಿಗೆ 15 ರಿಂದ 20 ದಿನಗಳು ಮಾತ್ರ ಕೆಲಸ ಸಿಗುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ.

ಸಿ ಮಿಸ್ 303/2017 ರಲ್ಲಿ ನಾನು ತಿಳಿಸಿರುವ ಸಂಗತಿಗಳಿಗೂ ಪ್ರಸ್ತುತ ಅರ್ಜಿಯಲ್ಲಿ ತಿಳಿಸಿರುವ ಸಂಗತಿಗಳಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಎದುರುದಾರರು ನನ್ನನ್ನು ವಾಪಸ್ ಕರೆದುಕೊಂಡು ಹೋಗುವುದಾಗಿ ಹೇಳಿದ್ದರು ಹಾಗಾಗಿ ನಾನು ಅಲ್ಲಿ ಆ ರೀತಿ ಸಂಗತಿಗಳನ್ನು ತಿಳಿಸಿದ್ದೆ, ಪ್ರಸ್ತುತ ಎದುರುದಾರರು ನನ್ನ ಜೊತೆ ಬಾಳ್ವೆ ಮಾಡಲು ಇಚ್ಛೆ ಇಲ್ಲ ಎಂದು ತಿಳಿಸಿರುತ್ತಾರೆ ಆದ ಕಾರಣ ಅದರಂತೆ ಈ ಅರ್ಜಿಯಲ್ಲಿ ನಿರೂಪಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಅರ್ಜಿಯಲ್ಲಿಯೂ ಸಹಾ ನಾನು ಜೀವನಾಂಶ ಕೋರಿದ್ದೆ ಎಂದರೆ ಸರಿ.   ಸಿ ಮಿಸ್ 303/2017 ರಲ್ಲಿ  ಜೀವನಾಂಶ ಕೊಡಲು ಬರುವುದಿಲ್ಲ ಎಂಬುದಾಗಿ ಆದೇಶವಾಗಿದ್ದು ಸದರಿ ಆದೇಶ ಪ್ರಶ್ನಿಸಿ ನಾನು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ. ಹಾಗಾಗಿ ಈ ಅರ್ಜಿಯಲ್ಲಿಯೂ ಸಹಾ ನಾನು ಜೀವನಾಂಶ ಪಡೆಯಲು ಅರ್ಹಳಲ್ಲ ಎಂದರೆ ನನಗೆ ಗೊತ್ತಿಲ್ಲ

ಎದುರುದಾರರ ಜೊತೆ ನಾನು ಸಹಬಾಳ್ವೆ ಮಾಡಲು ಇಚ್ಛೆ ಇಲ್ಲದೇ ಜೀವನಾಂಶ ಪಡೆಯುವ ಇರಾದೆಯಿಂದ ಎದುರುದಾರರ ವಿರುದ್ಧ ನಾನು ಪದೇ ಪದೇ ಅರ್ಜಿಯನ್ನು ದಾಖಲು ಮಾಡಿರುತ್ತೇನೆ

ಸಿ ಮಿಸ್ ಸಂಖ್ಯೆ226/ 2023

ಪಿ ಡಬ್ಲ್ಯೂ: 1 ಶ್ರೀಮತಿ ನೀಲಮ್ಮ

ಎಂದರೆ ಸಾಕ್ಷಿಯು ನಾನು ಎದುರುದಾರರ ಜೊತೆ ಸ್ವಲ್ಪದಿನ ವಾಸವಿದ್ದೆ ಹಾಗಾಗಿ ನಾನು ಜೀವನಾಂಶ ಕೋರಿರುತ್ತೇನೆ ಎಂದು ನುಡಿಯುತ್ತಾರೆ. ಸಿ ಮಿಸ್ 303/2017 ರಲ್ಲಿಯೂ ಸಹಾ ನಾನು ಎದುರುದಾರರ ಜೊತೆ ಸ್ವಲ್ಪ ದಿನ ವಾಸ ಮಾಡುತ್ತಿದ್ದೆ ಎಂಬ ಕಾರಣಕ್ಕಾಗಿಯೇ ಜೀವನಾಂಶ ಕೇಳಿದ್ದೆ ಎಂದರೆ ಸರಿ. ಎದುರುದಾರರಿಗೆ ಮಾನಸಿಕ ಕಿರುಕುಳ ನೀಡುವ ಉದ್ದೇಶದಿಂದ ಅವರ ವಿರುದ್ಧ ನಾನು ಪದೇ ಪದೇ ಅರ್ಜಿಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೋರಿರುವ ಪರಿಹಾರ ಪಡೆಯಲು ನಾನು ಅರ್ಹಳಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ

(ಕಾವ್ಯಶ್ರೀ. ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ